**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕೊಳ್ಳೇಗಾಲ**

**(ಪೀಠಾಸೀನಾ ಹನೂರು)**

**ದಿನಾಂಕಃ 03 ನೇ ಸೆಪ್ಟೆಂಬರ್ 2025**

ಉಪಸ್ಥಿತರು
ಶ್ರೀಮತಿ. ಕಾವ್ಯಶ್ರೀ ಎಂ.
ಬಿ.ಎ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಕೊಳ್ಳೇಗಾಲ.

**ಅಸಲು ದಾವಾ ಸಂಖ್ಯೆ. 241/2013**

**ವಾದಿಗಳು** : 1. ಹೆಚ್. ಮಲ್ಲುಸ್ವಾಮಿ ಬಿನ್ ಲೇಟ್ ಹೊಂಬಯ್ಯ ಅಃ ಹೊಂಬ
ಸುಮಾರು 68 ವರ್ಷಗಳು,

2. ರಘು. ಎಂ. ಬಿನ್ ಲೇಟ್ ಮಲ್ಲುಸ್ವಾಮಿ,
ಸುಮಾರು 33 ವರ್ಷಗಳು,

3. ಬಾಬು ಬಿನ್ ಹೆಚ್. ಮಲುಸ್ವಾಮಿ,
ಸುಮಾರು 30 ವರ್ಷಗಳು.
ಎಲರ ವಾಸಃ ಕಣೂರು ಗ್ರಾಮ,
ಕೊಳ್ಳೇಗಾಲ ತಾಲ್ಲೂಕು,
ಚಾಮರಾಜನಗರ ಜಿಲ್ಲೆ.

**ವಿರುದ್ದ/-**

**ಪತಿವಾದಿಗಳು** : ವಿ. ಶಿವಣ ಬಿನ್ ಲೇಟ್ ವೆಂಕಟಯ್ಯ,
ಸುಮಾರು 49 ವರ್ಷಗಳು,
ವಾಸಃ ಕಣೂರು ಗಾಮ,
ಕೊಳೇಗಾಲ ತಾಲೂಕು.
ಚಾಮರಾಜನಗರ ಜಿಲ್ಲೆ.

**-:ಮದ್ಯಂತರ ಅರ್ಜಿಯ ಪಕ್ಷಗಾರರ ಸ್ಥಾನಮಾನ:-**

**ಅರ್ಜಿದಾರರುಃ** **ವಿ. ಶಿವಣ್ಣ**

**(ಪ್ರತಿನಿಧಿಸುವವರುಃ ಶ್ರೀ. ಎಂ. ಆರ್. ಕೆ, ವಕೀಲರು)**

**……. ಪ್ರತಿವಾದಿ**

**- ವಿರುದ್ಧ -**

**ಎದುರುದಾರರರುಃ** ಹೆಚ್. ಮಲ್ಲುಸ್ವಾಮಿ ಮತ್ತು ಇತರರು

**(ಪ್ರತಿನಿಧಿಸುವವರುಃ ಶ್ರೀ. ಡಿ.ಎಸ್.ಬಿ, ವಕೀಲರು)**

**……. ವಾದಿಗಳು**

| | | |
|---|---|---|
| i | ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 10 |
| ii | ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರ | ದಾವೆಯ ಮುಂದಿನ ನಡವಳಿಕೆಗಳನ್ನು ತಡೆಹಿಡಿಯುವಂತೆ ಆದೇಶಿಸುವಂತೆ ಕೋರಿ |
| iii | ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | 17.10.2019 |
| iv | ಮಧ್ಯಂತರ ಅರ್ಜಿಯ ಸಂಖ್ಯೆ | ಮಧ್ಯಂತರ ಅರ್ಜಿ ಸಂಖ್ಯೆಃ 5 |
| v | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | 20.01.2023 |
| vi | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | 03.09.2025 |

## **ಆದೇಶ**

ಅರ್ಜಿದಾರರು/ಪ್ರತಿವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 10 ರಡಿಯಲ್ಲಿ ಮಧ್ಯತರ ಅರ್ಜಿ ಸಂಖ್ಯೆ 5ನ್ನು ಸಲ್ಲಿಸಿ, ಈ ನ್ಯಾಯಾಲಯದಲ್ಲಿ ವಿಲೆಗಾಗಿ ಬಾಕಿ ಇರುವ ಅಸಲು ದಾವೆ ಸಂಖ್ಯೆ 134-2013 ತೀರ್ಮಾನವಾಗುವವರೆಗೂ ಈ ದಾವೆಯ ಮುಂದಿನ ನಡವಳಿಕೆಗಳನ್ನು ತಡೆಹಿಡಿಯಬೇಕಾಗಿ, ಪ್ರಾಸ-1 ರವರ ಪಾಟಿ ಸವಾಲಿನ ಹಂತದಲ್ಲಿ, ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ, ಅರ್ಜಿದಾರರು ಈ ದಾವೆಯ ವಸ್ತು ವಿಷಯಕ್ಕೆ ಸಂಭಂದಿಸಿದಂತೆ, ಕೊಳ್ಳೇಗಾಲದ ಪ್ರಧಾನ ಸಿವಿಲ್ ನ್ಯಾಯಾದೀಶರ ನ್ಯಾಯಾಲಯದಲ್ಲಿ, ನಿರ್ಧಿಷ್ಟ ಕರಾರಿನ ನೆರವೇರಿಕೆ ಕೋರಿ ಈ ದಾವೆಯ ವಾದಿಯರ ವಿರುದ್ಧ ಅಸಲು ದಾವೆ ಸಂಖ್ಯೆ 134-2013ನ್ನು ದಾಖಲು ಮಾಡಲಾಗಿರುತ್ತದೆ. ಸದರಿ ಕ್ರಯದ ಕರಾರಿನಂತೆ ಸ್ವತ್ತಿನ ಸ್ವಾದೀನವನ್ನು ಸಹ ಪ್ರಧಾನಿಸಲಾಗಿರುತ್ತದೆ. ಹಾಗಾಗಿ, ಸ್ವತ್ತುಗಳ ವರ್ಗಾವಣಾ ಅಧಿನಿಯಮ ಕಲಂ 53(A) ರಂತೆ ಅರ್ಜಿದಾರರು ಸಲ್ಲಿಸಿರುವ ದಾವೆ ವಿಲೆ ಆಗುವವರೆವಿಗೂ ಸಹ ಅರ್ಜಿದಾರರ ಸ್ವತ್ತಿನಲ್ಲಿನ ಸ್ವಾದೀನವನ್ನು ರಕ್ಷಿಸಿವುದು ಅವಶ್ಯಕವಾಗಿರುತ್ತದೆ.

ಮುಂದುವರೆದು, ಈ ದಾವೆಯಲ್ಲಿನ ವಸ್ತು ವಿಷಯ ಮತ್ತು ಅಸಲು ದಾವೆ ಸಂಖ್ಯೆ 134-2013ರಲ್ಲಿನ ವಸ್ತು ವಿಷಯ ಒಂದೇ ಆಗಿರುತ್ತದೆ. ಹಾಗಾಗಿ, ಒಂದಕ್ಕೊಂದು ವಿರುದ್ಧವಾದ ತೀರ್ಪುನ್ನು ತಡೆಯುವ ಕಾರಣಕ್ಕಾಗಿ ಈ ದಾವೆಯ ನಡಾವಳಿಗೆ ತಡೆ ನೀಡುವುದು ಅವಶ್ಯಕವಾಗಿರುತ್ತದೆ. ಈ ದಾವೆ ಹಾಗೂ ಅಸಲು ದಾವೆ ಸಂಖ್ಯೆ 134-2013ರಲ್ಲಿನ ವಸ್ತು ವಿಷಯ, ಪಕ್ಷಗಾರರು ಒಂದೇ ಆಗಿರುತ್ತಾರೆ. ಆದ ಕಾರಣ, ವಾದಿಯು ಸಲ್ಲಿಸಿರುವ ಈ ದಾವೆಯನ್ನು ಅಸಲು ದಾವೆ ಸಂಖ್ಯೆ 134-2013 ನ್ನು ತೀರ್ಮಾನವಾಗುವವರೆಗೂ ತಡೆಹಿಡಿಯಬೇಕಾಗಿ ಕೋರಿ ಅರ್ಜಿಯನ್ನು ದಾಖಲು ಮಾಡಿರುತ್ತಾರೆ.

3. ಮೇಲ್ಕಂಡ ಅರ್ಜಿಗೆ ವಾದಿಯ ತಮ್ಮ ತಕರಾರು ಸಲ್ಲಿಸಿ, ಅರ್ಜಿದಾರರು ದಾಖಲು ಮಾಡಿರುವ ಅರ್ಜಿಯು ಕಾನೂನುನಾತ್ಮಕವಾಗಲೀ, ವಾಸ್ತವಿಕವಾಗಲೀ ಉರ್ಜಿತವಾಗಿರುವುದಿಲ್ಲ. ಮುಂದುವರೆದು, ಪ್ರತಿವಾದಿಯು ಈ ದಾವೆಯ ಒಂದನೇ ವಾದಿಯ ವಿರುದ್ಧ ಕಣ್ಣೂರು ಗ್ರಾಮದ ಸರ್ವೆ ನಂ 232/2ರ ವಿಸ್ತೀರ್ಣ 2.75 ಸೆಂಟ್ ಜಮೀನಿನ ಪೈಕಿ 1.44 ಸೆಂಟ್ ಜಮೀನಿಗೆ ಸಂಬಂದಿಸಿದಂತೆ ದಿನಾಂಕ 30.06.1987ರ ನೊಂದಾಯಿತವಲ್ಲದ ಕ್ರಯದ ಕರಾರು ಆಗಿದ್ದು, ಸ್ವಾದೀನಾವನ್ನು ಸಹ ನೀಡಿರುವುದಾಗಿ ತಿಳಿಸಿ, ವಾದಿಯರ ಸ್ವಾದೀನಾನುಭವಕ್ಕೆ ದಕ್ಕೆಯನ್ನುಂಟುಪಡಿಸಿರುತ್ತಾರೆ ಎಂಬುದಾಗಿ ತಿಳಿಸಿ ನಿರ್ಧಿಷ್ಟ ಕರಾರುಗಳ ನೆರವೇರಿಕೆ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ಈ ದಾವೆಯಲ್ಲಿ ವಾದಿಯರು ಪ್ರತಿವಾದಿಯ ವಿರುದ್ಧ ಒಟ್ಟು 2.75 ಸೆಂಟ್ ವಿಸ್ತೀರ್ಣಕ್ಕೆ ಮೂರು ಜನ ವಾದಿಯರು ಹಕ್ಕುದಾರರು ಎಂಬುದಾಗಿ ಘೋಷಿಸುವಂತೆ ಹಾಗೂ ಸೃಷ್ಟಿಸಿಕೊಂಡಿರುವ ದಾಖಲಾತಿಗೆ ವಾದಿಯರು ಬದ್ದರಲ್ಲವೆಂದು ಘೋಷಿಸುವಂತೆ ದಾವೆಯನ್ನು ದಾಖಲು ಮಾಡಲಾಗಿರುತ್ತದೆ. ಸದರಿ ಕ್ರಯದ ಕರಾರು ನೋಂದಾಯಿತವಲ್ಲದ ಕರಾರು ಆದ ಕಾರಣ ಸ್ವತ್ತು ವರ್ಗಾವಣಾ ಅಧಿನಿಯಮ ಕಲಂ 53(A) ಈ ದಾವೆಗೆ ಅನ್ವಯಕಾರಿಯಾಗಿರುವುದಿಲ್ಲ.

ಮುಂದುವರೆದು, ವಾದಿಯು 1.44 ಸೆಂಟ್ ಸ್ವತ್ತಿಗೆ ಸಂಭಂದಿಸಿದಂತೆ ನಿರ್ದಿಷ್ಟ ಕರಾರಿನ ನೆರವೇರಿಕೆ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ಆದರೆ, ಈ ದಾವೆಯಲ್ಲಿ ವಾದಿಯು ಒಟ್ಟು 2.75 ಸೆಂಟ್ ಸ್ವತ್ತಿಗೆ ಸಂಭಂದಿಸಿದಂತೆ ದಾವೆಯನ್ನು ದಾಖಲು ಮಾಡಿ ಹಕ್ಕು ಘೋಷಣೆ, ಶಾಶ್ವತ ನಿರ್ಭಂದಕಾಜ್ಞೇ ಹಾಗೂ ಸೃಷ್ಟಿಸಿರುವ ದಾಖಲಾತಿಗಳಿಗೆ ಬದ್ದರಲ್ಲವೆಂಬ ಪರಿಹಾರವನ್ನು ಕೋರಿಕೊಂಡಿರುತ್ತಾರೆ. ಅದರಂತೆ, ವಾದಿ ಸಲ್ಲಿಸಿರುವ ದಾವೆ ಹಾಗೂ ಪ್ರತಿವಾದಿ ಸಲ್ಲಿರುವ ದಾವೆಯಲ್ಲಿನ ಸ್ವತ್ತುಗಳ ವಿಸ್ತೀರ್ಣ ಮತ್ತು ಪರಿಹಾರ ಬೇರೆ ಬೇರೆಯಾಗಿರುತ್ತದೆ. ಹಾಗೂ ಸದರಿ ದಾವೆಯಲ್ಲಿನ ವಿವಾದಾಂಶಗಳು ಸಹ ಬೇರೆ-ಬೇರೆ ಆಗಿರುವ ಕಾರಣ ಪ್ರಸ್ತುತ ದಾವೆಯ ನಡಾವಳಿಗಳು ತಡೆಯಲು ಬರುವುದಿಲ್ಲ. ಆದ್ದರಿಂದ, ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರಿಕೊಳ್ಳುತ್ತಾರೆ.

4. ಉಭಯ ಪಕ್ಷಗಾರರ ವಾದ ವಿವಾದಗಳನ್ನು ಆಲಿಸಿದ ನಂತರ ಅರ್ಜಿದಾರರ ಅರ್ಜಿಯ ನ್ಯಾಯೋಚಿತ ವಿಲೆಗಾಗಿ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

| | |
|---|---|
| ಅಂಶ**-1** | ಅರ್ಜಿದಾರರು/ ಪ್ರತಿವಾದಿಯ ತನ್ನ ಅರ್ಜಿಯಲ್ಲಿ ಕೋರಿಕೊಂಡಿರುವಂತೆ ಅಸಲು ದಾವೆ ಸಂಖ್ಯೆ 134-2013 ವಿಲೆ ಆಗುವವರೆಗೂ, ವಾದಿಯ ಸಲ್ಲಿಸಿರುವ ಈ ದಾವೆಗೆ ತಡೆಯನ್ನು ನೀಡಲು ಸಾಕಷ್ಟ ಕಾರಣಗಳನ್ನು ರುಜುವಾತು ಪಡಿಸುವರೇ? |
| ಅಂಶ**-2** | ಯಾವ ಆದೇಶ? |

5. ಉಭಯಪಕ್ಷಗಾರರ ವಾದವನ್ನು ಆಲಿಸಲಾಯಿತು. ನ್ಯಾಯಾಲಯದ ಸಮಕ್ಷಮ ಇರುವ ದಾಖಾಲಾತಿಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಕಾರಣಗಳಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ-1 : ಸಕರಾತ್ಮಕವಾಗಿ,

ಅಂಶ-2 : ಅಂತಿಮ ಆದೇಶದಂತೆ,

:: **ಕಾರಣಗಳು** ::

6. **ಅಂಶ 1ಃ-** ಅರ್ಜಿದಾರರು/ಪ್ರತಿವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 10 ರಡಿಯಲ್ಲಿ, ಮಧ್ಯಂತರ ಅರ್ಜಿ ಸಂಖ್ಯೆ 5 ನ್ನು ಪ್ರಾಸ-1 ರವರ ಪಾಟಿ ಸವಾಲಿನ ಹಂತದಲ್ಲಿ ಸಲ್ಲಿಸಿ, ವಾದಿಯ ದಾವೆಯನ್ನು ಅಸಲು ದಾವೆ 134-2013 ವಿಲೆ ಆಗುವವರೆವಿಗೂ ಸಹ ತಡೆ ಹಿಡಿಯಬೇಕಾಗಿ ಕೋರಿ ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ.

7. ಅರ್ಜಿದಾರರ ಅರ್ಜಿಯಂತೆ, ಪ್ರತಿವಾದಿಯು ವಾದಿಯ ವಿರುದ್ದ ನಿರ್ಧಿಷ್ಟ ಕರಾರಿನ ನೆರವೇರಿಗೆ ಕೋರಿ ದಾವೆಯನ್ನು ದಾಖಲು ಮಾಡಿದ್ದು, ಆ ನಂತರ ವಾದಿಯು ಈ ದಾವೆಯನ್ನು ದಾಖಲು ಮಾಡಿ ದಾವಾ ಅನುಸೂಚಿತ ಸ್ವತ್ತಿಗೆ ಸಂಭಂದಿಸಿದಂತೆ ಹಕ್ಕು ಘೋಷಣೆ, ಶಾಶ್ವತ ನಿರ್ಭಂದಕಾಜ್ಞೆ ಹಾಗೂ ಸೃಷ್ಟಿಸಿಕೊಂಡಿರುವ ದಾಖಲಾತಿಯು ತಮಗೆ ಬಂಧನಕಾರಿಯಾಗಿರುವುದಿಲ್ಲ ಎಂಬ ಪರಿಹಾರ ಕೋರಿ ದಾವೆಯನ್ನು ದಾಖಲು ಮಾಡಿದ್ದು, ಪ್ರತಿವಾದಿಯು ಸಲ್ಲಿಸಿರುವ ದಾವೆ ವಿಲೆಗಾಗಿ ಬಾಕಿ ಇರುವ ಕಾರಣ, ವಾದಿಯು ಸಲ್ಲಿಸಿರುವ ಈ ದಾವೆಯನ್ನು ತಡೆಹಿಡಿಯಬೇಕಾಗಿ ಕೋರಿಕೊಂಡಿರುತ್ತಾರೆ. ವಾದಿಯು, ಪ್ರತಿವಾದಿಯು ಸಂಪೂರ್ಣ ಸ್ವತ್ತಿಗೆ ಸಂಭಂದಿಸಿದಂತೆ ದಾವೆಯನ್ನು ದಾಖಲು ಮಾಡಿದ್ದು, ಪ್ರತಿವಾದಿಯು ಸದರಿ ಸ್ವತ್ತಿನ 1.44 ಸೆಂಟ್ ಸ್ವತ್ತಿಗೆ ಮಾತ್ರವೇ ದಾವೆಯನ್ನು ದಾಖಲುಮಾಡಿರುತ್ತಾರೆ. ಈ ದಾವೆಯಲ್ಲಿ ಕೋರಿಕೊಂಡಿರುವ ಪರಿಹಾರ, ಸ್ವತ್ತಿನ ವಿಸ್ತೀರ್ಣ ಮತ್ತು ವಿವಾದಾಂಶಗಳು ಬೇರೆ-ಬೇರೆಯಾಗಿರುತ್ತದೆ. ಈ ಎಲ್ಲಾ ಕಾರಣದಿಂದ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಬೇಕಾಗಿ ಕೋರಿಕೊಳ್ಳುತ್ತಾರೆ.

8. ಪ್ರತಿವಾದಿಯ ದಿವಾಣಿ ಪ್ರಕ್ರಿಯಾ ಸಂತೆ ಕಲಂ.10 ರಡಿಯಲ್ಲಿ ಅರ್ಜಿಯನ್ನು ದಾಖಲು ಮಾಡಿ ವಾದಿಯು ಸಲ್ಲಿಸಿರುವ ಈ ದಾವೆಗೆ ಅಸಲು ದಾವೆ ಸಂಖ್ಯೆ 134-2013 ವಿಲೆ ಆಗುವವರೆಗೂ ತಡೆ ನೀಡಬೇಕಾಗಿ ಕೋರಿ ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 10 ರಡಿಯಲ್ಲಿ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 10,

> **ಕಲಂ 10:- ಒಂದು ದಾವೆಯಲ್ಲಿನ ವಿವಾದ ಆ ಮೊದಲೇ ವಿಷಯವು, ಹೂಡಲಾಗಿದ್ದು, ಇದೇ ಸ್ವಾಮ್ಯದ ಆಧಾರದ ಮೇಲೆ ವಾಜ್ಯ ನಡೆಸುತ್ತಿರುವ ಅದೇ ಪಕ್ಷಕಾರರು, ಅಥವಾ ಯಾರ ಅಧೀನ ಪಕ್ಷಕಾರರು ಅವರು ಇಲ್ಲವೇ ಅವರಲ್ಲಿ ಯಾರಾದರೂ ಕ್ಲೇಮು ಮಾಡುತ್ತಿರುವರೋ ಅವರು, ಪಕ್ಷಕಾರರಾಗಿರುವ ದಾವೆಯಲ್ಲಿ, ನೇರವಾಗಿಯೂ ಮತ್ತು ಸಾರಭಾತವಾಗಿಯೂ ವಿವಾದ್ಯವಾಗಿದ್ದರೆ ಮತ್ತು ಅಂಥಹ ದಾವೆಯು ಅದೇ ನ್ಯಾಯಾಲಯದಲ್ಲಿ ಅಥವಾ ಕ್ಲೇಮು ಮಾಡಲಾದ ಪರಿಹಾರವನ್ನು ಕೊಡಲು ಅಧಿಕಾರ ವ್ಯಾಪ್ತಿಯುಳ್ಳ ಭಾರತದ ಇನ್ನಾವುದೇ ನ್ಯಾಯಾಲಯದಲ್ಲಿ, ಅಥವಾ ಭಾರತದ ಎಲ್ಲೆಯಿಂದಾಚೆಗೆ ಕೇಂದ್ರ ಸರ್ಕಾರವು ಸ್ಥಾಪಿಸಿರುವ ಅಥವಾ ಮುಂದುವರೆಸಿಕೊಂಡು ಬುರುತ್ತಿರುವ ಮತ್ತು ಅಂಥದೇ**

**<u>ಅಧಿಕಾರ ವ್ಯಾಪ್ತಿಯುಳ್ಳ ಯಾವುದೇ ನ್ಯಾಯಾಲಯದಲ್ಲಿ, ಅಥವಾ ಉಚ್ಛತಮ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವಾಗ ಆ ದಾವೆಯ ಅಧಿವಿಚಾರಣೆಯನ್ನು ಮಾಡಲು ಯಾವ ನ್ಯಾಯಾಲಯವೂ ಉದ್ಯುಕ್ತವಾಗತಕ್ಕದ್ದಲ್ಲ.</u>**

**<u>ವಿವರಣೆಃ ವಿದೇಶಿ ನ್ಯಾಯಾಲಯದಲ್ಲಿ ದಾವೆಯು ಇತ್ಯರ್ಥದಲ್ಲಿರುವುದು, ಅದೇ ವ್ಯಾಜ್ಯ ಕಾರಣದ ಮೇಲೆ ಆಧಾರಿತವಾದ ದಾವೆಯ ಅಧಿವಿಚಾರಣೆಯನ್ನು ಭಾರದಲ್ಲಿನ ನ್ಯಾಯಾಲಯಗಳು ನಡೆಸುವುದನ್ನು ಪ್ರತಿವಾದಿಸುವುದಿಲ್ಲ.</u>**

ಎಂಬುದಾಗಿ ತಿಳಿಸಿರುತ್ತದೆ. ಅದರಂತೆ ಯಾವುದೇ ಒಂದು ದಾವೆಯ ವ್ಯವಹರಣೆಯನ್ನು ತಡೆಹಿಡಿಯುವ ಮುನ್ನ ಈ ಕೆಳಕಂಡ ಅಗತ್ಯತೆಗಳನ್ನು ಪುರೈಸತಕ್ಕದಾಗಿರುತ್ತದೆ . ಅವುಗಳೆಂದರೆಃ-

**<u>(1) ಎರಡು ದಾವೆಯ ಪಕ್ಷಗಾರರು ಒಂದೇ ಆಗಿರತಕ್ಕದ್ದು,</u>**

**<u>(2)ದಾವೆಗಳಲ್ಲಿನ ಕ್ಲೇಮು ನೇರವಾಗಿ ಮತ್ತು ಸಾರಭೂತವಾಗಿ ವಿವಾದದಲ್ಲಿರತಕ್ಕದ್ದು,</u>**

**<u>(3) ಎರಡು ದಾವೆಗಳು ವಿಲೆಗಾಗಿ ಬಾಕಿ ಇರತಕ್ಕದ್ದು,</u>**

**<u>(4) ಆ ಎರಡು ನ್ಯಾಯಾಲಯಗಳು ಕೋರಿಕೊಂಡಿರುವ ಪರಿಹಾರವನ್ನು ಕೊಡಲು ಸಕ್ಷಮವಾಗಿರುತಕ್ಕದ್ದು, ಅಥವಾ ಉಚ್ಚತಮ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿ ಇರತಕ್ಕದ್ದು,</u>**

9. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಪ್ರತಿವಾದಿಯು ತಾನು ವಾದಿಯ ವಿರುದ್ದ ದಾಖಲು ಮಾಡಿರುವ ದಾವೆಯ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿಕೊಂಡಿರುವುದಿಲ್ಲ. ಮುಂದುವರೆದು, ತಮ್ಮ ಅರ್ಜಿಯಲ್ಲಿಯೂ ಸಹ ಯಾವ ಸ್ವತ್ತಿಗೆ ಸಂಭಂದಿಸಿದಂತೆ ಪ್ರತಿವಾದಿಯು ಅಸಲು ದಾವೆ ಸಂಖ್ಯೆ 134-2013 ನ್ನು ದಾಖಲು ಮಾಡಿರುತ್ತಾರೆ ಎಂಬ ಬಗ್ಗೆ ಮಾಹಿತಿಯನ್ನು ನೀಡಿರುವುದಿಲ್ಲ. ಆದರೆ, ವಾದಿಯು ಸಲ್ಲಿಸಿರುವ ತಕರಾರನ್ನು ಪರಿಶೀಲಿಸಲಾಗಿ, ಪ್ರತಿವಾದಿಯು ಕಣ್ಣೂರು ಗ್ರಾಮದ ಸರ್ವೆ ನಂ 232/2ರ ವಿಸ್ತೀರ್ಣ 2.75 ಸೆಂಟ್ ವಿಸ್ತೀರ್ಣದ ಸ್ವತ್ತಿನ ಪೈಕಿ 1.44 ಸೆಂಟ್ ಸ್ವತ್ತಿಗೆ ಸಂಭಂದಿಸಿದಂತೆ ನಿರ್ದಿಷ್ಟ ಕರಾರಿನ ನೆರವೇರಿಕೆ ಕೋರಿ ದಾವೆಯನ್ನು ದಾಖಲು ಮಾಡಲಾಗಿರುತ್ತದೆ ಎಂಬುದಾಗಿ ಕಂಡು ಬಂದಿರುತ್ತದೆ. ವಾದಿಯ ವಾದಪತ್ರವನ್ನು ಗಮನಿಸಲಾಗಿ, ವಾದಿಯು ಸಹ ಲೋಕ್ಕನಹಳ್ಳಿ ಹೋಬಳಿ, ಣ್ಣೂರು ಗ್ರಾಮದ ಸರ್ವೆ ನಂ 232/2ರ ವಿಸ್ತೀರ್ಣ 2.75 ಸೆಂಟ್ ಸ್ವತ್ತಿಗೆ ಸಂಭಂದಿಸಿದಂತೆ ದಾವೆಯನ್ನು ದಾಖಲು ಮಾಡಿರುವುದು ಕಂಡು ಬಂದಿರುತ್ತದೆ. ಅದರಂತೆ, ಉಭಯಪಕ್ಷಗಾರರು ಸಲ್ಲಿಸಿರುವ

ದಾವೆಗಳ ಪಕ್ಷಗಾರರು ಒಬ್ಬರೇ ಆಗಿರುತ್ತಾರೆ. ಹಾಗೂ ಸದರಿ ದಾವೆಯಲ್ಲಿನ ಸ್ವತ್ತುಗಳೂ ಸಹ ಒಂದೇ ಆಗಿರುತ್ತದೆ.

ವಾದಿಯು ತನ್ನ ವಾದವನ್ನು ಮಂಡಿಸಿದಾಗ, ಈ ದಾವೆಯಲ್ಲಿ ಮೂರು ಜನ ವಾದಿಯರು ಹಾಗೂ ಒಟ್ಟೂ ವಿಸ್ತೀರ್ಣ 2.75 ಸೆಂಟ್ ವಿಸ್ತೀರ್ಣಕ್ಕೆ ದಾವೆಯನ್ನು ದಾಖಲು ಮಾಡಿರುವುದಾಗಿ ತಿಳಿಸಿರುತ್ತಾರೆ. ವಾದಿಯರು ಹಾಗೂ ಸ್ವತ್ತಿನ ವಿಸ್ತೀರ್ಣ ಹೆಚ್ಚಾದ ಕಾರಣಕ್ಕಾಗಿ ಪಕ್ಷಗಾರರು ಮತ್ತು ಸ್ವತ್ತುಗಳು ಬೇರೆ-ಬೇರೆ ಎಂಬುದಾಗುವುದಿಲ್ಲ. ಹಾಗಾಗಿ, ಎರಡು ದಾವೆಯಲ್ಲಿನ ಪಕ್ಷಗಾರರು ಮತ್ತು ಸ್ವತ್ತುಗಳು ಒಂದೇ ಆಗಿರುವುದು ಕಂಡು ಬರುತ್ತಿದೆ.

ಅರ್ಜಿದಾರರ ಅರ್ಜಿ ಮತ್ತು ವಾದಿಯ ತಕರಾರಿನಂತೆ, ಅರ್ಜಿದಾರರು ನಿರ್ಧಿಷ್ಟ ಕರಾರಿನ ನೆರವೇರಿಕೆ ಕೋರಿ, ಹಾಗೂ ವಾದಿಯು ಹಕ್ಕು ಘೋಷಣೆ , ಶಾಶ್ವತ ನಿರ್ಭಂದಕಾಜ್ಞೇ ಹಾಗೂ ಪ್ರತಿವಾದಿಯರು ಸೃಷ್ಟಿಸಿಕೊಂಡ ದಾಖಲಾತಿ ತಮಗೆ ಬಂಧನಕಾರಿಯಾಗಿರುವುದಿಲ್ಲ ಎಂಬುದಾಗಿ ಪರಿಹಾರವನ್ನು ಕೋರಿಕೊಂಡಿರುತ್ತಾರೆ. ಸದರಿ ಉಭಯ ಪಕ್ಷಗಾರರ ಕೋರಿ ಕೊಂಡಿರುವ ಪರಿಹಾರ ಮೇಲ್ನೋಟಕ್ಕೆ ಬೇರೆ-ಬೇರೆ ಎಂಬುದಾಗಿ ಕಂಡು ಬಂದಿದ್ದರೂ ಸಹ, ನಿರ್ದಿಷ್ಟ ಪರಿಹಾರ ಕೋರಿ ಸಲ್ಲಿಸಿರುವ ದಾವೆಯಲ್ಲಿ ಈ ದಾವೆಯಲ್ಲಿ ವಾದಿಯು ಕೋರಿಕೊಂಡಿರುವ ಎಲ್ಲಾ ಪರಿಹಾರಗಳು ಲಭ್ಯವಾಗುತ್ತದೆ. ಸದರಿ ನಿರ್ಧಿಷ್ಟ ಪರಿಹಾರ ಕೋರಿ ಸಲ್ಲಿಸಿರುವ ದಾವೆಯಲ್ಲಿ, ಪ್ರತಿವಾದಿಯು ದಾಖಲಾತಿಯನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂಬುದಾಗಿ ತೀರ್ಮಾನಿಸಿದ್ದೇ ಆದಲ್ಲಿ ಪ್ರತಿವಾದಿಯು ಯಾವುದೇ ಯಾವುದೇ ಪರಿಹಾರಕ್ಕೆ ಆರ್ಹನಾಗಿರುವುದಿಲ್ಲ. ಆಗ ವಾದಿಯು ಕೋರಿಕೊಂಡಿರುವಂತೆ ಸದರಿ ಕರಾರು ರದ್ದಾಗುವ ಸಾಧ್ಯತೆ ಇರುತ್ತದೆ. ಆ ನಂತರ ವಾದಿಯರು ಸ್ವತ್ತಿನ ಮಾಲೀಕತ್ವವನ್ನು ಹೊಂದುವ ಅವಕಾಶ ಇರುತ್ತದೆ. ಅದರಂತೆ ಪ್ರತಿವಾದಿಯು ಸಲ್ಲಿಸಿರುವ ದಾವೆಯು ವಿಲೆಗೊಂಡಿದ್ದೇ ಆದಲ್ಲಿ ಈ ದಾವೆಯಲ್ಲಿ ವಾದಿಕೋರಿಕೊಂಡಿರುವ ಪರಿಹಾರವನ್ನು ಪಡೆದುಕೊಳ್ಳಬಹುದಾಗಿರುತ್ತದೆ.

10. ವಾದಿ ಮತ್ತು ಪ್ರತಿವಾದಿಯರು ದಾಖಲು ಮಾಡಿರುವ ಪ್ರತ್ಯೇಕ ದಾವೆಯಲ್ಲಿನ ವಾದ ಪತ್ರವನ್ನು ಪರಿಶೀಲನೆ ಮಾಡಿ ನೋಡಲಾಗಿ, ಎರಡೂ ದಾವೆಯ ಪಕ್ಷಗಾರರು ಒಬ್ಬರೇ ಆಗಿರುತ್ತಾರೆ. ಹಾಗೂ, ಉಭಯ ಪಕ್ಷಗಾರರುಗಳು ಪ್ರತ್ಯೇಕವಾಗಿ ದಾಖಲು ಮಾಡಿರುವ ದಾವೆಯ ವಸ್ತು ವಿಷಯ ನೇರವಾಗಿ ಮತ್ತು ಸಾರಭೂತವಾಗಿ ಒಂದೇ ಆಗಿರುತ್ತದೆ. **ಮಾನ್ಯ ಸರ್ವೋಚ್ಚ ನ್ಯಾಯಾಲಯವು, National Institution of Mental Health and Neuro science Vs. C. Parameshwara** ಪ್ರಕರಣದ ಖಂಡಿಕೆ 8 ರಲ್ಲಿ 8.

> **"The object underlying Section 10 is to prevent courts of concurrent jurisdiction from simultaneously trying two parallel suits in respect of the same matter in issue. The object underlying Section 10 is to avoid two parallel trials on the same issue by two courts and to avoid recording of**

**conflicting findings on issues which are directly and substantially in issue in previously instituted suit. The language of Section 10 suggests that it is referable to a suit instituted in the civil court and it cannot apply to proceedings of other nature instituted under any other statute. The object of Section 10 is to prevent courts of concurrent jurisdiction from simultaneously trying two parallel suits between the same parties in respect of the same matter in issue. The fundamental test to attract Section 10 is, whether on final decision being reached in the previous suit, such decision would operate as res judicata in the subsequent suit. Section 10 applies only in cases where the whole of the subject-matter in both the suits is identical. The key words in Section 10 are "the matter in issue is directly and substantially in issue" in the previous instituted suit. The words "directly and substantially in issue" are used in contradistinction to the words "incidentally or collaterally in issue". Therefore, Section 10 would apply only if there is identity of the matter in issue in both the suits, meaning thereby, that the whole of the subject-matter in both the proceedings is identical."**

ಎಂಬುದಾಗಿ ತಿಳಿಸಿರುತ್ತದೆ. ಅದರಂತೆ ಕಲಂ 10 ಮೂಲ ಉದ್ದೇಶ ಎರಡು ದಾವೆಗಳು ವಿಲೆಗಾಗಿ ಬಾಕಿ ಇರುವಾಗ ಆ ಎರಡು ದಾವೆಗಳಲ್ಲಿ ವಿರೋಧಾಭಾಸ ಉಂಟಾಗುವ ತೀರ್ಪುಗಳು ಬಾರದಂತೆ ತಡೆಯುವ ಕಾರಣಕ್ಕಾಗಿ, ಹಾಗೂ ಒಂದು ದಾವೆಯಲ್ಲಿನ ತೀರ್ಪು ಮತ್ತೊಂದು ದಾವೆಯ ಪೂರ್ವ ನ್ಯಾಯ ಆಗುತ್ತದೆ ಎಂಬುದು ಕಂಡು ಬಂದಾಗ, ಕಲಂ 10 ರಂತೆ ಆನಂತರ ದಾಖಲು ಮಾಡಿದ ದಾವೆಯನ್ನು ತಡೆ ಹಿಡಿಯಬೇಕಾಗಿರುತ್ತದೆ. ಈ ದಿನ ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳಂತೆ ವಾದಿ ಮತ್ತು ಪ್ರತಿವಾದಿಯರು ದಾಖಲು ಮಾಡಿರುವ ದಾವೆಗಳಲ್ಲಿನ ವಸ್ತು ವಿಷಯ ಒಂದೇ ಆಗಿದ್ದು, ಆ ಎರಡು ದಾವೆಗಳಲ್ಲಿ ನ್ಯಾಯಾಲಯಗಳು ತೀರ್ಪುಗಳನ್ನು ಉದ್ಘೋಷಿಸುವುದರಿಂದ ತೀರ್ಪುಗಳಲ್ಲಿ ವಿರೋಧಾಭಾಸ ಉಂಟಾಗುತ್ತದೆ. ಹಾಗೂ ಒಂದು ದಾವೆಯಲ್ಲಿನ ತೀರ್ಪು, ಮತ್ತೊಂದು ದಾವೆಯಲ್ಲಿ ಪೂರ್ವ ನ್ಯಾಯವಾಗತ್ತದೆ. ಈ ಎಲ್ಲಾ ಕಾರಣಗಳಿಂದ ಅಂಶ-1ನ್ನು **ಸಕರಾತ್ಮಕವಾಗಿ** ಉತ್ತರಿಸಲಾಗಿದೆ.

11. **ಅಂಶ-2:** ಈ ಮೇಲ್ಕಂಡಂತೆ ಅಂಶ 1ರಲ್ಲಿ ಚರ್ಚಿಸಿದ ಎಲ್ಲಾ ಕಾರಣಗಳಿಗಾಗಿ, ಈ ಕೆಳಕಂಡಂತೆ ಮಾಡುವ ಆದೇಶ :-

**ಆದೇಶ**

ಅರ್ಜಿದಾರರು/ಪ್ರತಿವಾದಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 10 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 5 ರಡಿಯಲ್ಲಿನ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶದಂತೆ, ವಾದಿಯು ಸಲ್ಲಿಸಿರುವ ಈ ದಾವೆಯನ್ನು ಪ್ರತಿವಾದಿ ಸಲ್ಲಿಸಿರುವ ಅಸಲು ದಾವೆ ಸಂಖ್ಯೆ 134-2013 ವಿಲೇ ಆಗುವವರೆಗೂ ಸಹ ನಡವಳಿಕೆಗಳನ್ನು ತಡೆಹಿಡಿಯಲು ಆದೇಶಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರಗಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 03.09.2025 ರಂದು ಘೋಷಿಸಲಾಯಿತು.)

(ಕಾವ್ಯಶ್ರೀ ಎಂ)
ಸಿ/ಸಿ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಕೊಳ್ಳೇಗಾಲ. (ಪೀಠಾಸೀನ ಹನೂರು)

**(ಆದೇಶವನ್ನು ಪ್ರತ್ಯೇಕವಾಗಿ ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)**

-: **ಆದೇಶ** :-

ಅರ್ಜಿದಾರರು/ಪ್ರತಿವಾದಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 10 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 5 ರಡಿಯಲ್ಲಿನ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶದಂತೆ, ವಾದಿಯು ಸಲ್ಲಿಸಿರುವ ಈ ದಾವೆಯನ್ನು ಪ್ರತಿವಾದಿ ಸಲ್ಲಿಸಿರುವ ಅಸಲು ದಾವೆ ಸಂಖ್ಯೆ 134-2013 ವಿಲೇ ಆಗುವವರೆಗೂ ಸಹ ನಡವಳಿಕೆಗಳನ್ನು ತಡೆಹಿಡಿಯಲು ಆದೇಶಿಸಲಾಗಿದೆ.

ತೆರೆದ ನ್ಯಾಯಾಲಯದಲ್ಲಿ ಕರೆಯುವ ದಿನಾಂಕಃ 22.09.2025

(ಕಾವ್ಯಶ್ರೀ ಎಂ)
ಸಿ/ಸಿ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಕೊಳ್ಳೇಗಾಲ. (ಪೀಠಾಸೀನ ಹನೂರು)